

## ಶಾಂಕರ ಭಾಷ್ಯಸಮೇತ

# ಈಶಾವಾಸ್ಯ ಉಪನಿಷತ್ತು

ಸ್ವಾಮಿ ವೀರೇಶಾನಂದ



(ಮೂಲ, ಪದಾರ್ಥ, ಅನುವಾದ, ಶಾಂಕರಭಾಷ್ಯದ ಮೂಲ, ಶಾಂಕರಭಾಷ್ಯದ ಅನುವಾದ ಹಾಗೂ ಟಿಪ್ಪಣಿಗಳು)

ಭಾಗ ೧೧

**ಉಪಸಂಹಾರ ಭಾಷ್ಯ :** ***ಅವಿದ್ಯಯಾ ಮೃತ್ಯುಂ ತೀರ್ತ್ವಾ ವಿದ್ಯಯಾ ಅಮೃತಮಶ್ನುತೇ*** **(ಈ. ಉ. ೧೧)** ***ವಿನಾಶೇನ ಮೃತ್ಯುಂ ತೀರ್ತ್ವಾ ಅಸಂಭೂತ್ಯಾ ಅಮೃತಮಶ್ನುತೇ*** **(ಈ. ಉ. ೧೪) ಇತಿ ಶ್ರುತ್ವಾ ಕೇಚಿತ್ ಸಂಶಯಂ ಕುರ್ವಂತಿ । ಅತಃ ತತ್ ನಿರಾಕರಣಾರ್ಥಂ ಸಂಕ್ಷೇಪತಃ ವಿಚಾರಣಾಂ ಕರಿಷ್ಯಾಮಃ । ತತ್ರ ತಾವತ್ ಕಿಂನಿಮಿತ್ತಃ ಸಂಶಯ ಇತಿ, ಉಚ್ಯತೇ । ವಿದ್ಯಾ ಶಬ್ದೇನ ಮುಖ್ಯಾ ಪರಮಾತ್ಮವಿದ್ಯೈವ ಕಸ್ಮಾನ್ನ ಗೃಹ್ಯತೇ? ಅಮೃತತ್ವಂ ಚ ? ನನು ಉಕ್ತಾಯಾಃ ಪರಮಾತ್ಮವಿದ್ಯಾಯಾಃ ಕರ್ಮಣಶ್ಚ ವಿರೋಧಾತ್ ಸಮುಚ್ಚಯ ಅನುಪಪತ್ತಿಃ । ಸತ್ಯಮ್, ವಿರೋಧಸ್ತು ನ ಅವಗಮ್ಯತೇ, ವಿರೋಧ ಅವಿರೋಧಯೋಃ ಶಾಸ್ತ್ರಪ್ರಮಾಣಕತ್ವಾತ್ । ಯಥಾ ಅವಿದ್ಯಾನುಷ್ಠಾನಂ ವಿದ್ಯೋಪಾಸನಂ ಚ ಶಾಸ್ತ್ರಪ್ರಮಾಣಕಮ್, ತಥಾ ತದ್ವಿರೋಧ ಅವಿರೋಧೌ ಅಪಿ । ಯಥಾ ಚ ನ ಹಿಂಸ್ಯಾತ್ ಸರ್ವಾ ಭೂತಾನಿ ಇತಿ ಶಾಸ್ತ್ರಾತ್ ಅವಗತಂ ಪುನಃ ಶಾಸ್ತ್ರೇಣೈವ ಬಾಧ್ಯತೇ ಅಧ್ವರೇ ಪಶುಂ ಹಿಂಸ್ಯಾತ್ ಇತಿ । ಏವಂ ವಿದ್ಯಾವಿದ್ಯಯೋಃ ಅಪಿ ಸ್ಯಾತ್ । ವಿದ್ಯಾಕರ್ಮಣೋಶ್ಚ ಸಮುಚ್ಚಯಃ ।**

'**ಅವಿದ್ಯಯಾ ಮೃತ್ಯುಂ ತೀರ್ತ್ವಾ ವಿದ್ಯಯಾಮೃತಮಶ್ನುತೇ**' (ಈಶಾವಾಸ್ಯ, ೧೧): 'ಅವಿದ್ಯೆಯ (ಕರ್ಮ) ಮೂಲಕ ಮೃತ್ಯುವನ್ನು (ಸಹಜವಾದ ಕರ್ಮ ಮತ್ತು ಜ್ಞಾನ) ಮೀರಿಹೋಗಿ, ವಿದ್ಯೆಯಿಂದ (ದೇವತಾಜ್ಞಾನ) ಅಮೃತ ಅಂದರೆ ತಾನು ಉಪಾಸನೆ ಮಾಡುವ ದೇವತೆಯೊಡನೆ ಐಕ್ಯಭಾವವನ್ನು ಹೊಂದುತ್ತಾನೆ.' '**ವಿನಾಶೇನ ಮೃತ್ಯುಂ ತೀರ್ತ್ವಾ ಅಸಂಭೂತ್ಯಾ ಅಮೃತ ಮಶ್ನುತೇ**' (ಈಶಾವಾಸ್ಯ, ೧೪) – 'ವ್ಯಾಕೃತ ಉಪಾಸನೆಯಿಂದ ಐಶ್ವರ್ಯವಿಲ್ಲದಿರುವುದು ಎನ್ನುವ ಮೃತ್ಯುವನ್ನು ದಾಟಿ, ಅವ್ಯಾಕೃತ ಉಪಾಸನೆಯಿಂದ ಪ್ರಕೃತಿಲಯ ಎಂಬ ಸ್ಥಿತಿಯನ್ನು ಪಡೆದುಕೊಳ್ಳುತ್ತಾನೆ' – ಈ ಉಪನಿಷತ್ತಿನ ವಾಕ್ಯಗಳನ್ನು ಕೇಳಿ ಕೆಲವರು ಸಂಶಯವನ್ನು ವ್ಯಕ್ತಪಡಿಸುತ್ತಾರೆ. ಹೀಗಾಗಿ, ಅದನ್ನು ಹೋಗಲಾಡಿಸಲು, ಸಂಕ್ಷೇಪವಾಗಿ ಇದರ ವಿಚಾರವನ್ನು ಮಾಡುತ್ತೇವೆ.

**ಪ್ರಶ್ನೆ :** ಇಲ್ಲಿ ಮೊದಲು, ಸಂಶಯಕ್ಕೆ ಕಾರಣವಾದರೂ ಎಲ್ಲಿದೆ?

**ಆಕ್ಷೇಪ :** ಹೇಳುತ್ತೇವೆ. 'ವಿದ್ಯಾ' ಎಂಬ ಶಬ್ದಕ್ಕೆ (ಈಶಾವಾಸ್ಯ, ೧೧) ಮುಖ್ಯಾರ್ಥವಾದ ಪರಮಾತ್ಮ ವಿದ್ಯೆಯೇ ಎಂದು ಏಕೆ ಅರ್ಥಮಾಡಬಾರದು? ಹಾಗೆಯೇ ಅಮೃತ ಎಂಬ ಶಬ್ದಕ್ಕೆ (ಈಶಾವಾಸ್ಯ, ೧೧) ಮುಖ್ಯಾರ್ಥವಾದ ಅಮೃತತ್ವ ಎಂದು ಏಕೆ ಅರ್ಥಮಾಡಬಾರದು?

**ಸಿದ್ಧಾಂತಿ :** ಈಗಾಗಲೇ ಉಪದೇಶಿಸಿದ ಪರಮಾತ್ಮ ವಿದ್ಯೆ ಮತ್ತು ಕರ್ಮಗಳ ನಡುವೆ ಪರಸ್ಪರ ವಿರೋಧವಿರುವುದರಿಂದ ಅವುಗಳ ನಡುವಿನ ಸಮುಚ್ಚಯ (ಕೂಡುವಿಕೆ) ಹೊಂದಿಕೊಳ್ಳುವುದಿಲ್ಲವಷ್ಟೇ.

**ಆಕ್ಷೇಪ :** ಹೌದು ನಿಜವೇ, ಆದರೆ ಇವುಗಳ ನಡುವೆ ವಿರೋಧವಿದೆ ಎಂದು ಶಾಸ್ತ್ರಗಳಿಂದ ತಿಳಿದುಬರುವುದಿಲ್ಲ. ಅದು ಹೇಗೆಂದರೆ, ಅವಿದ್ಯಾ ಅನುಷ್ಠಾನ ಅಂದರೆ ಕರ್ಮಗಳ ಆಚರಣೆ ಮತ್ತು ವಿದ್ಯಾ ಉಪಾಸನೆ ಅಂದರೆ ಮಾನಸಿಕ ಉಪಾಸನೆ (ಧ್ಯಾನ) ಇವೆರಡಕ್ಕೂ ಶಾಸ್ತ್ರಗಳ ಪ್ರಮಾಣವಿದೆ. ಹಾಗೆಯೇ ಅವುಗಳೆರಡರ ನಡುವಿನ ವಿರೋಧ ಅಥವಾ ಅವಿರೋಧಕ್ಕೂ ಶಾಸ್ತ್ರಗಳ ಪ್ರಮಾಣ ಅತ್ಯಾವಶ್ಯಕ. ಉದಾಹರಣೆಗೆ, **ನ ಹಿಂಸ್ಯಾತ್ ಸರ್ವಾ ಭೂತಾನಿ** – ಯಾವ ಜೀವಿಗಳನ್ನೂ ಹಿಂಸಿಸಬಾರದು – ಈ ವಿಧಿಯನ್ನು ನಾವು ಶಾಸ್ತ್ರದಿಂದಲೇ ತಿಳಿದುಕೊಳ್ಳುತ್ತೇವೆ. ಇದಕ್ಕೆ ಒಂದು ಅಪವಾದವನ್ನೂ **ಅಧ್ವರೇ ಪಶುಂ ಹಿಂಸ್ಯಾತ್** – ಯಜ್ಞದಲ್ಲಿ ಪಶುವನ್ನು ಹಿಂಸಿಸಬಹುದು ಎಂಬ ವಾಕ್ಯದ ಮೂಲಕ ಶಾಸ್ತ್ರದಿಂದಲೇ ಅರಿತುಕೊಳ್ಳುತ್ತೇವೆ. ಹೀಗೆಯೇ ಪರಮಾತ್ಮವಿದ್ಯೆ ಅಥವಾ ಆತ್ಮವಿದ್ಯೆ ಮತ್ತು ಕರ್ಮಗಳ ವಿಷಯದಲ್ಲಿಯೂ ವಿರೋಧ ಅಥವಾ ಅವಿರೋಧಗಳಿಗೆ ಶಾಸ್ತ್ರವೇ ಪ್ರಮಾಣ. ಅಂಥ ಶಾಸ್ತ್ರದ ಪ್ರಮಾಣವಿಲ್ಲದ್ದರಿಂದ ಪರಮಾತ್ಮವಿದ್ಯೆ ಮತ್ತು ಕರ್ಮಗಳನ್ನು ಕೂಡಿಸಿಕೊಳ್ಳುವುದು ಸಾಧ್ಯ.

**ಭಾಷ್ಯ : ನ ; ದೂರಮೇತೇ ವಿಪರೀತೇ ವಿಷೂಚೀ ಅವಿದ್ಯಾ ಯಾ ಚ ವಿದ್ಯೇತಿ ಜ್ಞಾತಾ (ಕ. ಉ. ೧ . ೨ . ೪) ಇತಿ ಶ್ರುತೇಃ । ವಿದ್ಯಾಂ ಚಾವಿದ್ಯಾಂ ಚ ಇತಿ ವಚನಾತ್ ಅವಿರೋಧಃ ಇತಿ ಚೇತ್, ನ; ಹೇತುಸ್ವರೂಪಫಲವಿರೋಧಾತ್ । ವಿದ್ಯಾವಿದ್ಯಾ ವಿರೋಧ-ಅವಿರೋಧಯೋಃ ವಿಕಲ್ಪ ಅಸಂಭವಾತ್ । ಸಮುಚ್ಚಯವಿಧಾನಾತ್ ಅವಿರೋಧ ಏವ ಇತಿ ಚೇತ್, ನ ; ಸಹಸಂಭವ ಅನುಪಪತ್ತೇಃ । ಕ್ರಮೇಣ ಏಕಾಶ್ರಯೇ ಸ್ಯಾತಾಂ ವಿದ್ಯಾವಿದ್ಯೇ ಇತಿ ಚೇತ್, ನ ; ವಿದ್ಯೋತ್ಪತ್ತೌ ತದಾಶ್ರಯೇ ಅವಿದ್ಯಾನುಪಪತ್ತೇಃ । ನ ಹಿ ಅಗ್ನಿಃ ಉಷ್ಣಃ ಪ್ರಕಾಶಃ ಚ ಇತಿ ವಿಜ್ಞಾನ ಉತ್ಪತ್ತೌ ಯಸ್ಮಿನ್ ಆಶ್ರಯೇ ತದುತ್ಪನ್ನಮ್, ತಸ್ಮಿನ್ನೇವ ಆಶ್ರಯೇ ಶೀತಃ ಅಗ್ನಿಃ ಅಪ್ರಕಾಶೋ ವಾ ಇತಿ ಅವಿದ್ಯಾಯಾಃ ಉತ್ಪತ್ತಿಃ, ನ ಅಪಿ ಸಂಶಯಃ ಅಜ್ಞಾನಂ ವಾ । *'ಯಸ್ಮಿನ್ ಸರ್ವಾಣಿ ಭೂತಾನಿ ಆತ್ಮೈವಾ ಭೂತ್ ವಿಜಾನತಃ । ತತ್ರ ಕೋ ಮೋಹಃ ಕಃ ಶೋಕ ಏಕತ್ವಮ್ ಅನುಪಶ್ಯತಃ'* (ಈ. ಉ. ೭) ಇತಿ ಶೋಕಮೋಹಾದಿ ಅಸಂಭವ ಶ್ರುತೇಃ । ಅವಿದ್ಯಾಸಂಭವಾತ್ ತದುಪಾದಾನಸ್ಯ ಕರ್ಮಣಃ ಅಪಿ ಅನುಪಪತ್ತಿಮ್ ಅವೋಚಾಮ । ಅಮೃತಮಶ್ನುತೇ ಇತಿ ಆಪೇಕ್ಷಿಕಮ್ ಅಮೃತಮ್ ; ವಿದ್ಯಾಶಬ್ದೇನ ಪರಮಾತ್ಮವಿದ್ಯಾಗ್ರಹಣೇ *ಹಿರಣ್ಮಯೇನ* (ಈ. ಉ. ೧೫) ಇತ್ಯಾದಿನಾ ದ್ವಾರಮಾರ್ಗಾದಿ ಯಾಚನಮ್ ಅನುಪಪನ್ನಂ ಸ್ಯಾತ್। ತಸ್ಮಾತ್ ಉಪಾಸನಯಾ ಸಮುಚ್ಚಯಃ ನ ಪರಮಾತ್ಮವಿಜ್ಞಾನೇನ ಇತಿ । ತಸ್ಮಾತ್ ಯಥಾ ವ್ಯಾಖ್ಯಾತಃ ಏವ ಮಂತ್ರಾಣಾಮ್ ಅರ್ಥಃ ಇತಿ ಉಪರಮ್ಯತೇ।**

**ಸಿದ್ಧಾಂತಿ :** ಇದು ಸಾಧ್ಯವಿಲ್ಲ. '**ದೂರಮೇತೇ ವಿಪರೀತೇ ವಿಷೂಚೀ ಅವಿದ್ಯಾಯಾ ಚ ವಿದ್ಯೇತಿ ಜ್ಞಾತಾ**' (ಕಠ ೧ . ೨ . ೪) – 'ಯಾವುದು ವಿದ್ಯೆಯೆಂದು ಅರಿತಿದ್ದೇವೆಯೋ, ಯಾವುದು ಅವಿದ್ಯೆಯೆಂದು ಗೊತ್ತಾಗಿರುವುದೋ ಇವೆರಡೂ ಒಂದಕ್ಕೊಂದು ದೂರವಾಗಿವೆ, (ಏಕೆಂದರೆ) ಅವೆರಡೂ ವಿರುದ್ಧ ದಿಕ್ಕುಗಳ ಕಡೆಗೆ ಕರೆದುಕೊಂಡು ಹೋಗುತ್ತವೆ' ಎಂದು ಕಠೋಪನಿಷತ್ತಿನಲ್ಲಿ ಸ್ಪಷ್ಟವಾಗಿ ಹೇಳಿದೆ.

**ಆಕ್ಷೇಪ : 'ವಿದ್ಯಾಂ ಚ ಅವಿದ್ಯಾಂ ಚ'** (ಈಶ, ೧೧) – ಯಾವನು ವಿದ್ಯೆ ಮತ್ತು ಅವಿದ್ಯೆ ಇವೆರಡನ್ನೂ ಒಟ್ಟಿಗೆ ಆಚರಿಸಬೇಕೆಂದು ಅರಿತಿರುತ್ತಾನೆಯೋ, ಎಂಬ ಉಪನಿಷತ್ತಿನ ವಚನವೂ ಇದೆ. ಹೀಗಾಗಿ ವಿದ್ಯೆ ಮತ್ತು ಅವಿದ್ಯೆಗಳ ನಡುವೆ ವಿರೋಧವಿಲ್ಲ.

**ಸಿದ್ಧಾಂತಿ :** (ಇಲ್ಲಿ ಸಮುಚ್ಚಯ ಸಾಧ್ಯವಾಗುವುದು ಕರ್ಮ ಮತ್ತು ಉಪಾಸನೆಗಳ ನಡುವೆಯೇ ಹೊರತು, ಪರಮಾತ್ಮವಿದ್ಯೆ ಮತ್ತು ಕರ್ಮಗಳ ನಡುವೆ ಅಲ್ಲ. ಇಲ್ಲಿ ವಿದ್ಯೆ ಅಂದರೆ ಉಪಾಸನೆ ಎಂದುಕೊಂಡರೆ, ಸಮುಚ್ಚಯ ಸಾಧ್ಯವಾಗುತ್ತದೆ. ಪರಮಾತ್ಮವಿದ್ಯೆ ಎಂದುಕೊಂಡರೆ, ಸಮುಚ್ಚಯ ಸಾಧ್ಯವಾಗುವುದಿಲ್ಲ.) ವಿದ್ಯೆ ಮತ್ತು ಅವಿದ್ಯೆಗಳ ವಿಷಯದಲ್ಲಿ ಅವುಗಳ ಹೇತು (ಕಾರಣ), ಸ್ವರೂಪ ಮತ್ತು ಫಲಗಳಲ್ಲಿ ವಿರೋಧವು ಕಂಡುಬರುತ್ತದೆ. (ಹೀಗಾಗಿ ಅವುಗಳ ನಡುವೆ ವಿರೋಧವು ಖಂಡಿತ ಇದೆ) ವಿದ್ಯೆ ಮತ್ತು ಅವಿದ್ಯೆಗಳ ನಡುವೆ ವಿರೋಧವೂ ಇದೆ, ಅವಿರೋಧವೂ ಇದೆ ಎನ್ನುವ ವಿಕಲ್ಪವನ್ನು ಮಾಡುವುದು ತಾರ್ಕಿಕವಾಗಿ ಅಸಂಭವ.

**ಆಕ್ಷೇಪ :** ಇಲ್ಲಿ ಸಮುಚ್ಚಯವನ್ನು ಹೇಳಿರುವುದರಿಂದ ವಿದ್ಯೆ ಮತ್ತು ಅವಿದ್ಯೆಗಳ ನಡುವೆ ಅವಿರೋಧವಿದೆ ಎಂದುಕೊಂಡರೆ ಹೇಗೆ?

**ಸಿದ್ಧಾಂತಿ :** ಇದು ಸಾಧ್ಯವಿಲ್ಲ. ಏಕೆಂದರೆ ವಿದ್ಯೆ ಮತ್ತು ಅವಿದ್ಯೆ ಇವೆರಡೂ ಒಟ್ಟಿಗೆ ಇರುತ್ತದೆ ಎನ್ನುವ ವಾದ ಸಮಂಜಸವಲ್ಲ.

**ಆಕ್ಷೇಪ :** ವಿದ್ಯೆ ಮತ್ತು ಅವಿದ್ಯೆಗಳು ಒಂದಾದ ಮೇಲೊಂದು ಕ್ರಮೇಣ ಒಬ್ಬನೇ ವ್ಯಕ್ತಿಯಲ್ಲಿ ಇರಬಹುದಲ್ಲವೆ?

**ಸಿದ್ಧಾಂತಿ :** *(ಒಬ್ಬನೇ ವ್ಯಕ್ತಿಯಲ್ಲಿ, ಮೊದಲು ಅವಿದ್ಯೆ ಅಂದರೆ ಕರ್ಮ, ತದನಂತರ ಪರಮಾತ್ಮವಿದ್ಯೆ ಒದಗಿಬರಲು ಸಾಧ್ಯ. ಮೊದಲು ವಿದ್ಯೆ, ಆಮೇಲೆ ಕರ್ಮ ಬರುವುದು ಸಾಧ್ಯವಿಲ್ಲ – ಶ್ರೀಶಂಕರಾಚಾರ್ಯರ ಭಾಷ್ಯಕ್ಕೆ ಶ್ರೀ ಆನಂದಗಿರಿಗಳ ಟೀಕೆಯಿಂದ)* ವಿದ್ಯೆಯು ಉತ್ಪತ್ತಿಯಾದಾಗ, ಅವಿದ್ಯೆಯು ನಾಶವಾಗುವುದಷ್ಟೇ. ಹೀಗಾಗಿ ವಿದ್ಯೆ ಯಾವ ವ್ಯಕ್ತಿಯಲ್ಲಿ ಇರುತ್ತದೆಯೋ ಅವನಲ್ಲಿಯೇ ಅವಿದ್ಯೆಯೂ ಇರುವುದು ಸಮಂಜಸವಾಗಿರುವುದಿಲ್ಲ. ಉದಾಹರಣೆಗೆ, **ಅಗ್ನಿರುಷ್ಣಃ ಪ್ರಕಾಶಃ ಚ** – ಅಗ್ನಿಯು ಬಿಸಿಯಾಗಿದೆ, ಪ್ರಕಾಶಮಯವೂ ಆಗಿದೆ ಎನ್ನುವ ಜ್ಞಾನವನ್ನು ಬೆಂಕಿಯ ವಿಷಯದಲ್ಲಿ ನಾವು ಪಡೆದುಕೊಳ್ಳುತ್ತೇವೆ ಎಂದುಕೊಳ್ಳೋಣ. ಈ ಸಮಯದಲ್ಲಿಯೇ ಉಷ್ಣ ಮತ್ತು ಪ್ರಕಾಶಗಳಿಗೆ ಆಶ್ರಯವಾದ ಅದೇ ಅಗ್ನಿಯಲ್ಲಿ, **ಶೀತಃ ಅಗ್ನಿಃ ಅಪ್ರಕಾಶೋ ವಾ** – ಅಗ್ನಿಯು ತಣ್ಣಗಿದೆ, ಅದಕ್ಕೆ ಬೆಳಕಿಲ್ಲ ಎನ್ನುವ ಬೆಂಕಿಯ ಬಗೆಗಿನ ಅಜ್ಞಾನವಾಗಲಿ, ಈ ವಿಷಯದಲ್ಲಿ ಸಂಶಯಜ್ಞಾನವಾಗಲಿ ಉತ್ಪತ್ತಿಯಾಗಲು ಸಾಧ್ಯವಿಲ್ಲ.

**ಯಸ್ಮಿನ್ ಸರ್ವಾಣಿ ಭೂತಾನಿ ಆತ್ಮೈವಾಭೂತ್ ವಿಜಾನತಃ । ತತ್ರ ಕೋ ಮೋಹಃ, ಕಃ ಶೋಕಃ, ಏಕತ್ವಮ್ ಅನುಪಶ್ಯತಃ** (ಈಶಾವಾಸ್ಯ, ೭) ಯಾವ ಕಾಲದಲ್ಲಿ ಪರಮಾರ್ಥವಾದ ಆತ್ಮವನ್ನೇ ಯಾರು ನೋಡುತ್ತಿರುವನೋ ಅವನಿಗೆ ಎಲ್ಲ ಜೀವರಾಶಿಗಳು


ಕೂಡ ಆತ್ಮವೇ ಆಗಿಬಿಡುತ್ತವೆ. ಆ ಸಮಯದಲ್ಲಿ ಆತ್ಮನ ಏಕತ್ವವನ್ನು ನೋಡುವ ಆತ್ಮಜ್ಞಾನಿಗೆ ಶೋಕವೆಲ್ಲಿ, ಮೋಹವೆಲ್ಲಿ? (ಶೋಕಮೋಹಗಳು ಉಂಟಾಗಲು ಸಾಧ್ಯವಿಲ್ಲ.) – ಈ ಮಂತ್ರದ ಮೂಲಕ ಉಪನಿಷತ್ತು ಆತ್ಮಜ್ಞಾನಿಯಲ್ಲಿ ಶೋಕ ಮತ್ತು ಮೋಹಗಳು ಅಸಂಭವ ಎಂದು ಒತ್ತಿ ಹೇಳುತ್ತದೆ. ಈ ಶ್ರುತಿಯ ಪ್ರಮಾಣದಿಂದಲೇ ಆತ್ಮಜ್ಞಾನಿಯಲ್ಲಿ ಅವಿದ್ಯೆಯು ಅಸಂಭವವೆಂದೂ, ಹಾಗೂ ಅವಿದ್ಯೆಯಿಂದ ಉಂಟಾಗುವ ಕರ್ಮಗಳೂ ಕೂಡ ಸಾಧ್ಯವಿಲ್ಲವೆಂದೂ ನಾವು ಈಗಾಗಲೇ ಪ್ರತಿಪಾದಿಸಿದ್ದೇವೆ.

ಹಾಗೂ, **ಅಮೃತಮಶ್ನುತೇ** (ಈಶಾವಾಸ್ಯ, ೧೧) – ವಿದ್ಯೆಯಿಂದ ಅಮೃತವನ್ನು ಪಡೆದುಕೊಳ್ಳುತ್ತಾನೆ ಎಂದು ಉಪನಿಷತ್ತು ಹೇಳಿರುವುದು ಆಪೇಕ್ಷಿಕವಾದ ಗತಿಯನ್ನು, ಅಂದರೆ, ದೇವತಾ ಉಪಾಸನೆಯಿಂದ ಸಾಧಕನು ಪಡೆದುಕೊಳ್ಳುವ ಇಷ್ಟದೇವತೆಯ ಜೊತೆಗಿನ ಐಕ್ಯಭಾವವನ್ನು. ವಿದ್ಯಾ ಎಂಬ ಶಬ್ದವನ್ನು ಉಪಾಸನೆ ಎಂದು ತಿಳಿದುಕೊಳ್ಳದೆ, ಪರಮಾತ್ಮವಿದ್ಯೆ ಅಥವಾ ಆತ್ಮವಿದ್ಯೆ ಎಂದು ಅರಿತುಕೊಳ್ಳುವುದು ತಪ್ಪು. ಏಕೆಂದರೆ, ಹಾಗೆ ಮಾಡಿದರೆ, **ಹಿರಣ್ಮಯೇನ ಪಾತ್ರೇಣ** (ಈಶಾವಾಸ್ಯ , ೧೫) ಮುಂತಾದ ಮಂತ್ರಗಳಲ್ಲಿ, ಸಾಧಕನು ತನ್ನ ಇಷ್ಟದೇವತೆಯನ್ನು ಸೇರುವ ಮಾರ್ಗದ ದ್ವಾರವನ್ನು ಪ್ರಾರ್ಥಿಸಿಕೊಂಡಿರುವುದು ಸಮಂಜಸವಾಗುವುದಿಲ್ಲ. (ಏಕೆಂದರೆ ಬ್ರಹ್ಮಜ್ಞಾನಿಗೆ ಯಾವುದೇ ಮಾರ್ಗದಲ್ಲಿ ಹೋಗುವುದಾಗಲಿ, ಬರುವುದಾಗಲಿ ಇರುವುದಿಲ್ಲ. ಅವನು ಸರ್ವಾತ್ಮಭಾವವನ್ನು ಪಡೆದುಕೊಳ್ಳುತ್ತಾನೆ.) ಆದ್ದರಿಂದ, ಅವಿದ್ಯೆಯ (ಕರ್ಮ) ಜೊತೆಗೆ ಉಪಾಸನೆಯ ಕೂಡುವಿಕೆ ಸಾಧ್ಯವಾಗುತ್ತದೆಯೇ ಹೊರತು, ಪರಮಾತ್ಮವಿದ್ಯೆಯ ಜೊತೆಗೆ ಕರ್ಮದ ಸಮುಚ್ಚಯವು ಸಾಧ್ಯವಾಗುವುದಿಲ್ಲ. ಆದ್ದರಿಂದ ಈಶಾವಾಸ್ಯ ಉಪನಿಷತ್ತಿನ ಮಂತ್ರಗಳ ಅರ್ಥವು ನಾವು ವ್ಯಾಖ್ಯಾನ ಮಾಡಿದ ರೀತಿಯಲ್ಲಿಯೇ ಇದೆ. ಹೀಗೆ ಹೇಳಿ, ಈ ವಿಷಯದ ಚರ್ಚೆಯನ್ನು ನಾವು ಅಂತ್ಯಗೊಳಿಸುತ್ತೇವೆ.

**ಇತಿ ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯಸ್ಯ ಶ್ರೀಗೋವಿಂದಭಗವತ್ಪೂಜ್ಯಪಾದಶಿಷ್ಯಸ್ಯ ಶ್ರೀಮಚ್ಛಂಕರಭಗವತಃ ಕೃತೌ ಈಶಾವಾಸ್ಯೋಪನಿಷದ್ಭಾಷ್ಯಮ್ ಸಂಪೂರ್ಣಮ್ ।**

ಶ್ರೀಮತ್ ಪರಮಹಂಸಪರಿವ್ರಾಜಕಾಚಾರ್ಯರಾದ ಶ್ರೀಗೋವಿಂದ ಭಗವತ್ಪಾದ ಪೂಜ್ಯಪಾದರ ಶಿಷ್ಯರಾದ ಶ್ರೀಮತ್ ಶಂಕರ ಭಗವತ್ಪಾದರಿಂದ ರಚಿತವಾದ ಈಶಾವಾಸ್ಯ ಉಪನಿಷತ್ತಿನ ಮೇಲಿನ ಭಾಷ್ಯವು ಸಂಪೂರ್ಣವಾಯಿತು. *(ಸಮಾಪ್ತಿ)*

**ಯುವಚೇತನ**



## ಭಗವಂತನ ಸಾಮ್ರಾಜ್ಯ

ಭಗವಂತನ ಸಾಮ್ರಾಜ್ಯ ನಮ್ಮಲ್ಲಿಯೇ ಇದೆ. ಅವನು ಇಲ್ಲಿಯೇ ಇರುವನು. ಅವನೇ ಎಲ್ಲರ ಆತ್ಮ. ಅವನನ್ನು ನಿಮ್ಮ ಆತ್ಮನಲ್ಲಿಯೂ ನೋಡಿ. ಅದೇ ವ್ಯಾವಹಾರಿಕ ಧರ್ಮ, ಅದೇ ಮುಕ್ತಿ. ನಾವು ಎಷ್ಟರ ಮಟ್ಟಿಗೆ ಆ ಗುರಿಯ ಕಡೆಗೆ ಮುಂದುವರಿದಿರುವೆವು ಎಂಬುದನ್ನು ನಾವೇ ಕೇಳಿಕೊಳ್ಳೋಣ. ನಾವು ಎಷ್ಟು ಮಟ್ಟಿಗೆ ದೇಹಾರಾಧಕರು ಅಥವಾ ದೇವರನ್ನು ನಂಬುವವರಾಗಿದ್ದೇವೆ, ನಾವು ಎಷ್ಟರ ಮಟ್ಟಿಗೆ ಆತ್ಮನನ್ನು ನಂಬುತ್ತೇವೆ ಎಂಬುದನ್ನು ಕೇಳಿಕೊಳ್ಳೋಣ. ಅದೇ ನಿಜವಾದ ಸ್ವಾರ್ಥಶೂನ್ಯತೆ, ಮುಕ್ತಿ, ಅದೇ ನಿಜವಾದ ಪೂಜೆ. ಆತ್ಮಸಾಕ್ಷಾತ್ಕಾರವನ್ನು ಮಾಡಿಕೊಳ್ಳಿ. ನೀವು ಮಾಡಬೇಕಾದುದು ಇಷ್ಟೇ. ನೀವು ಅನಂತಾತ್ಮ ಎಂದು ನಿಮ್ಮನ್ನು ಅರಿತುಕೊಳ್ಳಿ. ಅದೇ ಅನುಷ್ಠಾನ ಧರ್ಮ. ಉಳಿದವುಗಳೆಲ್ಲ ಅವ್ಯವಹಾರಿಕ. ಏಕೆಂದರೆ ಉಳಿದವುಗಳೆಲ್ಲ ಮಾಯವಾಗುವುವು. ಆತ್ಮನೊಂದೇ ಎಂದಿಗೂ ಮಾಯವಾಗುವುದಿಲ್ಲ. ಅದು ನಿತ್ಯವಾದುದು. ಆಸ್ಪತ್ರೆಗಳು ಬಿದ್ದು ಹೋಗುವುವು. ರೈಲ್ವೆ ಕಂಬಿಗಳನ್ನು ಹಾಕಿದವರೆಲ್ಲ ಸತ್ತು ಹೋಗುವರು. ಈ ಜಗತ್ತು ಚೂರು ಚೂರಾಗಿ ಹೋಗುವುದು. ಸೂರ್ಯ ಕಣ್ಮರೆಯಾಗುವನು. ಆದರೆ ಆತ್ಮ ಎಂದೆಂದಿಗೂ ಇರುವುದು.

ಯಾವುದು ಮೇಲು? ನಾಶವಾಗುತ್ತಿರುವುದನ್ನು ಅರಸುವುದೋ, ನಾಶವಾಗದೆ ಇರುವುದನ್ನು ಅರಸುವುದೋ? ನಿಮ್ಮ ಶಕ್ತಿಯನ್ನೆಲ್ಲಾ ಖರ್ಚುಮಾಡಿ ಯಾವುದೋ ಪ್ರಾಪಂಚಿಕ ವಸ್ತುವನ್ನು ಪಡೆದುಕೊಳ್ಳುವಿರಿ. ಅದನ್ನು ಅನುಭವಿಸುವ ಹೊತ್ತಿಗೆ ಮೃತ್ಯು ಬರುವುದು. ನೀವು ಎಲ್ಲವನ್ನೂ ತ್ಯಜಿಸಬೇಕಾಗುವುದು. ಒಬ್ಬ ಚಕ್ರವರ್ತಿ ಎಲ್ಲರನ್ನೂ ಜಯಿಸಿದ್ದ. ಸಾಯುವ ಸಮಯ ಬಂದಾಗ ಕೊಪ್ಪರಿಗೆಯಲ್ಲಿಟ್ಟಿದ್ದ ಐಶ್ವರ್ಯಗಳನ್ನೆಲ್ಲಾ ತನ್ನ ಮುಂದೆ ತರುವಂತೆ ಹೇಳಿದ. ತಂದು ಅವನ್ನೆಲ್ಲಾ ಅವನ ಮುಂದೆ ಸುರಿದರು. ಆ ದೊಡ್ಡ ವಜ್ರವನ್ನು ನನ್ನ ಕೈಗೆ ಕೊಡಿ ಎಂದ. ಅದನ್ನು ಎದೆಯ ಮೇಲೆ ಇಟ್ಟುಕೊಂಡು ಅಳತೊಡಗಿದನು. ಹೀಗೆ ಅಳುತ್ತಾ ಅಳುತ್ತಾ ನಾಯಿ ಸಾಯುವಂತೆಯೇ ಅವನೂ ಸತ್ತ. *(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ.೬, ಪು. ೨೧೭)*